**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 677/2023**

**ಹೆಸರು** :- **ಶೇಖರಪ್ಪ**

**ತಂದೆಯ ಹೆಸರು** :- **ಗುತ್ಯಪ್ಪ**

**ವಯಸ್ಸು** :- **58 ವರ್ಷ**

**ಉದ್ಯೋಗ** :- **ವ್ಯವಸಾಯ**

**ಸ್ಥಳ** :- **ಚಿಕ್ಕಶಕುನ**

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 22.06.2022 ರಂದು ಚಾಸಾ-12 ರವರು ನನ್ನನ್ನು ಓಟೂರು ಗ್ರಾಮದಲ್ಲಿ ಗಲಾಟೆ ಆದ ಬಗ್ಗೆ ಚಾಸಾ-12 ರವರು ನನ್ನನ್ನು ಕರೆದುಕೊಂಡು ಹೋಗಿದ್ದು, ಮೃತ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಸಂಜೆ 5.00 ರಿಂದ 6.00 ಗಂಟೆಯವರೆಗೆ ಪಂಚನಾವೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಯು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಿದ್ದು, ಅವುಗಳನ್ನು ಘಟನಾ ಸ್ಥಳದಲ್ಲಿ ತೆಗೆದಿರುತ್ತಾರೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವು ಈಗಾಗಲೇ ನಿಪಿ-2 ಮತ್ತು 3 ಎಂದು

ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಪಂಚನಾಮೆಗೆ ಹಾಜರಾಗುವಂತೆ ನೀಡಿದ ನೋಟಿಸ್ ಆಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–4 ಎ ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ.ಪಿ.ಎಸ್.ಕೆ. ವಕೀಲರಿಂದಃ</u>**

ಪಂಚನಾಮೆಗೆ ಸಹಕರಿಸಲು ಪೋಲಿಸರು ನನಗೆ ನೋಟಿಸ್ ನೀಡಿರುತ್ತಾರೆ. ಪೋಲಿಸರು ನನಗೆ ಠಾಣೆಗೆ ಕರೆದು ನೋಟಿಸನ್ನು ನೀಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಜರುಗಿಸದೇ ಠಾಣೆಯಲ್ಲಿ ಜರುಗಿಸಿರುತ್ತಾರೆ ಅಂದರೆ ಸರಿಯಲ್ಲ. ಪಂಚನಾಮೆಗೆ ಸಹಕರಿಸಲು ಪೊಲೀಸರು ನನಗೆ ನೋಟಿಸ್ ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**